ಸಂಯುಕ್ತ ಕರ್ನಾಟಕ

# ಬೌದ್ಧಿಕ ತೀಕ್ಷ್ಣತೆಯೇ ಶಿಕ್ಷಣ

**ಬೆಂಗಳೂರು**

ಶಿಕ್ಷಣವೆಂಬುದು ಕೇವಲ ವಿಷಯಗಳನ್ನು ತಲೆಯಲ್ಲಿ ಕಲೆಹಾಕುವುದಲ್ಲ. ಬದಲಾಗಿ ಬೌದ್ಧಿಕ ತೀಕ್ಷ್ಣತೆಯನ್ನು ತೀವ್ರಗೊಳಿಸುವುದು ಎಂದು ಎಸ್.ವ್ಯಾಸ ವಿಶ್ವವಿದ್ಯಾಲಯದ ಕುಲಪತಿ ಡಾ.ಎನ್.ನಾಗೇಂದ್ರ ಅವರು ಅಭಿಪ್ರಾಯಪಟ್ಟರು.

ಶನಿವಾರ ನಡೆದ ಜೈನ ವಿಶ್ವವಿದ್ಯಾಲಯದ 5ನೇ ಘಟಿಕೋತ್ಸವದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದ ಅವರು, ಹೊಸ ಬೆಳವಣಿಗೆ, ಹೊಸ ಕಾರ್ಯಕ್ರಮಗಳನ್ನು ಅರಸಿ ನಾವು ಉತ್ಕೃಷ್ಟತೆಯ ಮಾರ್ಗದಲ್ಲಿ ಸಾಗುವಾಗ ಹಲವು ಸಮಸ್ಯೆಗಳು ಎದುರಾಗುತ್ತದೆ. ಆದರೆ, ಯೋಗ, ಆಧ್ಯಾತ್ಮಿಕ ಮಾರ್ಗ ಮೂಲಕ ಇಂತಹ ಸವಾಲುಗಳನ್ನು ಯಶಸ್ವಿಯಾಗಿ ನಿಭಾಯಿಸಲು ಸಾಧ್ಯವಾಗುತ್ತದೆ. ಅಲ್ಲದೇ, ಬೌದ್ಧಿಕ ತಿಳುವಳಿಕೆ ಹಾಗೂ ಬದ್ಧತೆಯನ್ನು ಮೂಡಿಸಲು ಸಹಕಾರಿಯಾಗುತ್ತದೆ ಎಂದು ಹೇಳಿದರು.

ಘಟಿಕೋತ್ಸವದಲ್ಲಿ ಜೈನ್ ವಿವಿಯ ವಾಣಿಜ್ಯ, ಮ್ಯಾನೇಜ್‌ಮೆಂಟ್, ಅರ್ಥಶಾಸ್ತ್ರ, ಜೈವಿಕ ತಂತ್ರಜ್ಞಾನ, ಸೂಕ್ಷ್ಮ ಜೀವಶಾಸ್ತ್ರ, ನೃತ್ಯ, ಸಮೂಹ ಸಂವಹನ, ಆಂಗ್ಲ, ಕನ್ನಡ ಮತ್ತು ಸಂಸ್ಕೃತ ವಿಷಯಗಳಲ್ಲಿ ಉತ್ತೀರ್ಣರಾದ 2374 ವಿದ್ಯಾರ್ಥಿಗಳಿಗೆ ಜೈನ್ ವಿವಿ ಕುಲಪತಿಗಳಾದ ಡಾ.ಸುಂದರ್ ರಾಜನ್ ಪದವಿ ಪ್ರದಾನ ಮಾಡಿದರು.